Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1 | नई दिल्ली सोमवार, डिसेम्बर 22, 1986 | पुष्य 1, 1908 (शक) | खण्ड–6 |
| No. 1 | New Delhi Monday, December 22, 1986 | Pushya 1, 1908 (Saka) | Vol. 6 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಡಿಸೆಂಬರ್ ೨೨, ೧೯೮೬ | ಪುಷ್ಯ ೧, ೧೯೦೮ (ಶಕ) | ಸಂಪುಟ ೬ |

## MINISTRY OF LAW AND JUSTICE

(Legislative Department)

New Delhi, October 30, 1986

The translations in Kannada of the following namely—(1) The All India Services Act, 1951 (2) The Muslim Personal Law (Shariat) Application Act, 1937 (3) The Identification of Prisoners Act, 1920 (4) The Government Saving Certificates Act, 1959 (5) The Indian Fisheries Act, 1897 (6) The Indian Christian Marriage Act, 1872 (7) The Census Act, 1948 (8) The Seamen's Provident Fund Act, 1966 (9) The Asian Development Bank Act, 1966 10) The Official Secrets Act, 1923.

ಕೆಳಕಂಡ ಅಧಿನಿಯಮಗಳು ಎಂದರೆ (೧) ಅಖಿಲ ಭಾರತ ಸೇವಾ ಅಧಿನಿಯಮ, ೧೯೫೧ (೨) ಮುಸ್ಲಿಮರ ವೈಯಕ್ತಿಕ ಕಾನೂನು (ಷರೀಯತ್) ಅನ್ವಯ ಅಧಿನಿಯಮ, ೧೯೩೭ (೩) ಬಂಧಿಗಳನ್ನು ಗುರ್ತಿಸುವ ಅಧಿನಿಯಮ, ೧೯೨೦ (೪) ಸರ್ಕಾರೀ ಉಳಿತಾಯ ಪ್ರಮಾಣ ಪತ್ರ ಅಧಿನಿಯಮ, ೧೯೫೯ (೫) ಭಾರತ ಮೀನುಗಾರಿಕೆ ಅಧಿನಿಯಮ, ೧೮೯೭ (೬) ಭಾರತೀಯ ಕ್ರೈಸ್ತರ ವಿವಾಹ ಅಧಿನಿಯಮ, ೧೮೭೨ (೭) ಜನಗಣತಿ ಅಧಿನಿಯಮ, ೧೯೪೮ (೮) ನಾವಿಕರ ಭವಿಷ್ಯ ನಿಧಿ ಅಧಿನಿಯಮ, ೧೯೬೬ (೯) ಏಷ್ಯಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, ೧೯೬೬ (೧೦) ಸರ್ಕಾರಿ ರಹಸ್ಯ ಅಧಿನಿಯಮ, ೧೯೨೩.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

## ಬಂದಿಗಳನ್ನು ಗುರುತಿಸುವ ಅಧಿನಿಯಮ, 1920

## 1920ರ ಅಧಿನಿಯಮ, ಸಂಖ್ಯೆ 33

[9ನೇ ಸೆಪ್ಟೆಂಬರ್, 1920]

ನಿರ್ಣೀತ ಅಪರಾಧಿಗಳ ಮತ್ತು ಇತರರ ಅಳತೆಗಳನ್ನು ಮತ್ತು ಛಾಯಾಚಿತ್ರಗಳನ್ನು ತೆಗೆದುಕೊಳ್ಳುವುದನ್ನು ಅಧಿಕೃತಗೊಳಿಸುವ ಅಧಿನಿಯಮ.

ನಿರ್ಣೀತ ಅಪರಾಧಿಗಳ ಮತ್ತು ಇತರರ ಅಳತೆಗಳನ್ನು ಮತ್ತು ಛಾಯಾಚಿತ್ರಗಳನ್ನು ತೆಗೆದುಕೊಳ್ಳುವುದನ್ನು ಅಧಿಕೃತಗೊಳಿಸುವುದು ವಿಹಿತವಾಗಿರುವುದರಿಂದ ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:–

1. **ಚಿಕ್ಕ ಹೆಸರು ಮತ್ತು ವ್ಯಾಪ್ತಿ.–** (1) ಈ ಅಧಿನಿಯಮವನ್ನು ಬಂದಿಗಳನ್ನು ಗುರುತಿಸುವ ಅಧಿನಿಯಮ, 1920 ಎಂದು ಕರೆಯತಕ್ಕದ್ದು; ಮತ್ತು

(2) ಇದು, 1956ರ ನವೆಂಬರ್ 1 ಕ್ಕೆ ನಿಕಟಪೂರ್ವದಲ್ಲಿ 'ಬಿ' ಭಾಗದ ರಾಜ್ಯಗಳಲ್ಲಿದ್ದ ರಾಜ್ಯ ಕ್ಷೇತ್ರಗಳನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

2. **ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದೇನಾದರೂ ಇದ್ದ ಹೊರತು,–

(ಎ) "ಅಳತೆಗಳು" ಎಂಬುದು ಬೆರಳಿನ ಗುರುತುಗಳನ್ನು ಮತ್ತು ಹೆಜ್ಜೆಯ ಗುರುತುಗಳನ್ನು ಒಳಗೊಳ್ಳುತ್ತದೆ;

(ಬಿ) "ಪೋಲೀಸ್ ಅಧಿಕಾರಿ" ಎಂದರೆ ಪೊಲೀಸ್ ಠಾಣೆಯ ಪ್ರಭಾರವನ್ನು ಹೊಂದಿರುವ ಅಧಿಕಾರಿ, ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5) ರ XIV ನೇ ಅಧ್ಯಾಯದ ಮೇರೆಗೆ ತನಿಖೆ ನಡೆಸುತ್ತಿರುವ ಪೊಲೀಸ್ ಅಧಿಕಾರಿ ಅಥವಾ ಸಬ್ ಇನ್ಸ್‌ಪೆಕ್ಟರ್‌ನ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಇತರ ಯಾರೇ ಪೊಲೀಸ್ ಅಧಿಕಾರಿ ಎಂದು ಅರ್ಥ; ಮತ್ತು

(ಸಿ) "ಗೊತ್ತುಪಡಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ಗೊತ್ತುಪಡಿಸಲಾದುದು ಎಂದು ಅರ್ಥ.

3. **ನಿರ್ಣೀತ ಅಪರಾಧಿಗಳ ಅಳತೆ, ಇತ್ಯಾದಿಗಳನ್ನು ತೆಗೆದುಕೊಳ್ಳುವುದು.–** (ಎ) ಒಂದು ವರ್ಷ ಅಥವಾ ಅದಕ್ಕೂ ಮೇಲ್ಪಟ್ಟ ಅವಧಿಯ ಕಠಿಣ ಕಾರಾವಾಸದಿಂದ ದಂಡನೀಯವಾಗುವ ಯಾವುದೇ ಅಪರಾಧದ ಅಪರಾಧ ನಿರ್ಣೀತನಾದ ಅಥವಾ ತರುವಾಯದ ಅಪರಾಧ ನಿರ್ಣಯದಲ್ಲಿ, ಹೆಚ್ಚಿಸಲಾದ

ದಂಡನೆಗೆ ಅವನನ್ನು ಹೊಣೆಯಾಗಿಸುವ ಯಾವುದೇ ಅಪರಾಧದ ಬಗ್ಗೆ ಅಪರಾಧ ನಿರ್ಣೀತನಾದ ಪ್ರತಿಯೊಬ್ಬ ವ್ಯಕ್ತಿಯು; ಅಥವಾ

(ಬಿ) ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5)ರ 118ನೇ ಪ್ರಕರಣದ ಮೇರೆಗೆ ಆತನ ಒಳ್ಳೆಯ ನಡತೆಗಾಗಿ ಭದ್ರತೆಯನ್ನು ಕೊಡುವಂತೆ ಆದೇಶಿಸಲಾದ ಪ್ರತಿಯೊಬ್ಬ ವ್ಯಕ್ತಿಯು

– ಹಾಗೆ ಅಗತ್ಯಪಡಿಸಿದರೆ ಗೊತ್ತುಪಡಿಸಿದ ರೀತಿಯಲ್ಲಿ ಅವನ ಅಳತೆಗಳನ್ನು ಮತ್ತು ಛಾಯಾಚಿತ್ರವನ್ನು ತೆಗೆದುಕೊಳ್ಳಲು ಪೊಲೀಸ್ ಅಧಿಕಾರಿಗೆ ಒಪ್ಪಿಗೆ ನೀಡತಕ್ಕದ್ದು.

4. **ನಿರ್ಣೀತ ಅಪರಾಧಿಗಳಲ್ಲದ ವ್ಯಕ್ತಿಗಳ ಅಳತೆ, ಇತ್ಯಾದಿಗಳನ್ನು ತೆಗೆದುಕೊಳ್ಳುವುದು.**– ಒಂದು ವರ್ಷದ ಅಥವಾ ಅದಕ್ಕೂ ಮೇಲ್ಪಟ್ಟ ಅವಧಿಯ ಕಠಿಣ ಕಾರಾವಾಸದಿಂದ ದಂಡನೀಯನಾಗುವ ಅಪರಾಧದ ಸಂಬಂಧದಲ್ಲಿ ದಸ್ತಗಿರಿಯಾದ ಯಾರೇ ವ್ಯಕ್ತಿಯು, ತನ್ನ ಅಳತೆಗಳನ್ನು ಗೊತ್ತುಪಡಿಸಿದ ರೀತಿಯಲ್ಲಿ ತೆಗೆದುಕೊಳ್ಳಲು ಪೊಲೀಸ್ ಅಧಿಕಾರಿಯು ಅಗತ್ಯಪಡಿಸಿದರೆ ಅದಕ್ಕೆ ಒಪ್ಪಿಗೆ ನೀಡತಕ್ಕದ್ದು.

5. **ವ್ಯಕ್ತಿಯ ಅಳತೆಗಳನ್ನು ಅಥವಾ ಛಾಯಾಚಿತ್ರವನ್ನು ತೆಗೆದುಕೊಳ್ಳುವುದಕ್ಕೆ ಆದೇಶ ನೀಡಲು ದಂಡಾಧಿಕಾರಿಯ ಅಧಿಕಾರ.**– ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5)ರ ಮೇರೆಗಿನ ಯಾವುದೇ ತನಿಖೆ ಅಥವಾ ವ್ಯವಹರಣೆಯ ಉದ್ದೇಶಗಳಿಗಾಗಿ, ಯಾರೇ ವ್ಯಕ್ತಿಯ ಅಳತೆಗಳನ್ನು ಅಥವಾ ಛಾಯಾಚಿತ್ರವನ್ನು ತೆಗೆದುಕೊಳ್ಳಲು ಒಪ್ಪಿಗೆ ನೀಡಬೇಕೆಂದು ಆ ವ್ಯಕ್ತಿಗೆ ನಿರ್ದೇಶಿಸುವುದು ವಿಹಿತವೆಂದು ದಂಡಾಧಿಕಾರಿಗೆ ಮನದಟ್ಟಾದರೆ, ಹಾಗೆಂದು ಆದೇಶಿಸಬಹುದು ಮತ್ತು ಆ ಸಂದರ್ಭದಲ್ಲಿ ಆ ಆದೇಶವು ಯಾವ ವ್ಯಕ್ತಿಗೆ ಸಂಬಂಧಪಡುತ್ತದೋ ಆ ವ್ಯಕ್ತಿಯನ್ನು ಆದೇಶದಲ್ಲಿ ನಿರ್ದಿಷ್ಟಪಡಿಸಿದ ಸಮಯದಲ್ಲಿ ಮತ್ತು ಸ್ಥಳದಲ್ಲಿ ಹಾಜರುಪಡಿಸತಕ್ಕದ್ದು ಅಥವಾ ಅವನೇ ಹಾಜರಾಗತಕ್ಕದ್ದು ಮತ್ತು ಸಂದರ್ಭಾನುಸಾರ ತನ್ನ ಅಳತೆಗಳನ್ನು ಅಥವಾ ಛಾಯಾಚಿತ್ರವನ್ನು ತೆಗೆದುಕೊಳ್ಳಲು ಪೊಲೀಸ್ ಅಧಿಕಾರಿಗೆ ಒಪ್ಪಿಗೆ ನೀಡತಕ್ಕದ್ದು.

ಪರಂತು, ಯಾರೇ ವ್ಯಕ್ತಿಯ ಛಾಯಾಚಿತ್ರವನ್ನು ತೆಗೆಯುವಂತೆ ನಿರ್ದೇಶಿಸುವ, ಯಾವುದೇ ಆದೇಶವನ್ನು ಪ್ರಥಮ ದರ್ಜೆ ದಂಡಾಧಿಕಾರಿಯ ಹೊರತು, ಮಾಡತಕ್ಕದ್ದಲ್ಲ:

ಮತ್ತೂ ಪರಂತು, ಆ ವ್ಯಕ್ತಿಯು ಈ ಹಿಂದೆ ದಸ್ತಗಿರಿಯಾಗಿದ್ದ ಹೊರತು, ಅಂಥ ತನಿಖೆಯ ಅಥವಾ ವ್ಯವಹರಣೆಯ ಸಂಬಂಧದಲ್ಲಿ, ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

6. **ಅಳತೆಗಳು, ಇತ್ಯಾದಿಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರತಿರೋಧ.**– (1) ಈ ಅಧಿನಿಯಮದ ಮೇರೆಗೆ ತನ್ನ ಅಳತೆಗಳನ್ನು ಅಥವಾ ಛಾಯಾಚಿತ್ರವನ್ನು ತೆಗೆದುಕೊಳ್ಳಲು ಒಪ್ಪಿಗೆ ನೀಡುವಂತೆ

ಅಗತ್ಯಪಡಿಸಲಾದ ಯಾರೇ ವ್ಯಕ್ತಿಯು, ಅದನ್ನು ತೆಗೆದುಕೊಳ್ಳುವುದನ್ನು ಪ್ರತಿರೋಧಿಸಿದರೆ ಅಥವಾ ಒಪ್ಪಿಗೆ ನೀಡಲು ನಿರಾಕರಿಸಿದರೆ, ಅದನ್ನು ತೆಗೆದುಕೊಳ್ಳಲು ಅವಶ್ಯಕವಾದ ಎಲ್ಲಾ ಮಾರ್ಗೋಪಾಯಗಳನ್ನು ಬಳಸುವುದು ಕಾನೂನುಬದ್ಧವಾಗಿರತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ಅಳತೆಗಳನ್ನು ಅಥವಾ ಛಾಯಾಚಿತ್ರಗಳನ್ನು ತೆಗೆದುಕೊಳ್ಳುವುದನ್ನು ಪ್ರತಿರೋಧಿಸುವುದನ್ನು ಅಥವಾ ಅದಕ್ಕೆ ಒಪ್ಪಿಗೆ ನೀಡಲು ನಿರಾಕರಿಸುವುದನ್ನು, ಭಾರತ ದಂಡ ಸಂಹಿತೆ (1860ರ 45) ಯ 186ನೇ ಪ್ರಕರಣದ ಮೇರೆಗೆ ಅಪರಾಧವೆಂದು ಭಾವಿಸತಕ್ಕದ್ದು.

**7. ಖುಲಾಸೆಯಾದ ಮೇಲೆ ಛಾಯಾಚಿತ್ರಗಳು ಮತ್ತು ಅಳತೆಗಳು, ಇತ್ಯಾದಿ ದಾಖಲೆಗಳ ನಾಶ.–** ಈ ಹಿಂದೆ ಒಂದು ವರ್ಷ ಅಥವಾ ಅದಕ್ಕೆ ಮೇಲ್ಪಟ್ಟ ಅವಧಿಯ ಕಠಿಣ ಕಾರಾವಾಸದಿಂದ ದಂಡನೀಯವಾಗುವ ಅಪರಾಧದ ನಿರ್ಣೀತ ಅಪರಾಧಿಯಾಗಿರದ ಯಾರೇ ವ್ಯಕ್ತಿಯ ಅಳತೆಗಳನ್ನು ಅಥವಾ ಛಾಯಾಚಿತ್ರವನ್ನು ಅಧಿನಿಯಮದ ಉಪಬಂಧಗಳಿಗನುಸಾರವಾಗಿ ತೆಗೆದುಕೊಳ್ಳಲಾಗಿದ್ದು, ಅಂಥ ವ್ಯಕ್ತಿಯನ್ನು ಯಾವುದೇ ನ್ಯಾಯಾಲಯವು ಅಧಿವಿಚಾರಣೆ ಇಲ್ಲದೆ ಬಿಟ್ಟುಬಿಟ್ಟರೆ ಅಥವಾ ವಿಮುಕ್ತಗೊಳಿಸಿದರೆ ಅಥವಾ ಖುಲಾಸೆ ಮಾಡಿದರೆ, ಹಾಗೆ ತೆಗೆದುಕೊಳ್ಳಲಾಗಿರುವ ಎಲ್ಲ ಅಳತೆಗಳನ್ನು ಮತ್ತು ಎಲ್ಲಾ ಛಾಯಾಚಿತ್ರಗಳನ್ನು, (ನೆಗೆಟಿವ್ ಹಾಗೂ ಪ್ರತಿ ಇವೆರಡನ್ನೂ) ನ್ಯಾಯಾಲಯವು ಅಥವಾ (ಅಧಿವಿಚಾರಣೆಯಿಲ್ಲದೆ ವ್ಯಕ್ತಿಯನ್ನು ಬಿಡುಗಡೆ ಮಾಡಿರುವ ಸಂದರ್ಭದಲ್ಲಿ) ಜಿಲ್ಲಾ ದಂಡಾಧಿಕಾರಿಯು ಅಥವಾ ಉಪವಿಭಾಗೀಯ ಅಧಿಕಾರಿಯು, ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಅನ್ಯಥಾ ನಿರ್ದೇಶಿಸಿದ ಹೊರತು, ನಾಶಪಡಿಸತಕ್ಕದ್ದು, ಅಥವಾ ಅವುಗಳನ್ನು ಆತನಿಗೆ ವಾಪಸ್ಸು ಕೊಡತಕ್ಕದ್ದು.

**8. ನಿಯಮಗಳನ್ನು ರಚಿಸಲು ಅಧಿಕಾರ.– (1)** ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ನಿರ್ದಿಷ್ಟವಾಗಿ ಹಾಗೂ ಮೇಲೆ ಹೇಳಿದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು,–

(ಎ) 5ನೇ ಪ್ರಕರಣದ ಮೇರೆಗೆ ವ್ಯಕ್ತಿಗಳ ಛಾಯಾಚಿತ್ರಗಳನ್ನು ತೆಗೆಯುವುದರ ಮೇಲೆ ನಿರ್ಬಂಧಗಳು;

(ಬಿ) ಯಾವ ಸ್ಥಳಗಳಲ್ಲಿ ಅಳತೆಗಳನ್ನು ಮತ್ತು ಛಾಯಾಚಿತ್ರಗಳನ್ನು ತೆಗೆದುಕೊಳ್ಳಬಹುದೋ ಆ ಸ್ಥಳಗಳು;

(ಸಿ) ತೆಗೆದುಕೊಳ್ಳಬಹುದಾದ ಅಳತೆಗಳ ಸ್ವರೂಪ;

(ಡಿ) ಯಾವ ವಿಧಾನದಲ್ಲಿ ಯಾವುದೇ ವರ್ಗ ಅಥವಾ ವರ್ಗಗಳ ಅಳತೆಗಳನ್ನು ತೆಗೆದುಕೊಳ್ಳಬೇಕೋ ಆ ವಿಧಾನ;

(ಇ) 3ನೇ ಪ್ರಕರಣದ ಮೇರೆಗೆ ಛಾಯಾಚಿತ್ರವನ್ನು ತೆಗೆದುಕೊಳ್ಳುವಾಗ ವ್ಯಕ್ತಿಯು ಧರಿಸಬೇಕಾದ ಉಡುಪು; ಮತ್ತು

(ಎಫ್) ಅಳತೆಗಳ ಮತ್ತು ಛಾಯಾಚಿತ್ರಗಳ ದಾಖಲೆಗಳ ಸಂರಕ್ಷಣೆ, ಸುರಕ್ಷಿತ ಅಭಿರಕ್ಷೆ, ನಾಶ ಮತ್ತು ವಿಲೆ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸತಕ್ಕದ್ದು.

**9. ದಾವೆಗಳ ಪ್ರತಿಷೇಧ.–** ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಮೆರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

********